O.S. 208/2013
P.W.3

**ಸಾಕ್ಷಿಯನ್ನು ದಿನಾಂಕಃ 29-08-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರವರಿಂದಃ**

ದಿಃ 04.06.1975 ರಂದು ಸಕ್ರಿ ಪರಸಪ್ಪನ ಮಗ ಹನುಮಪ್ಪನಿಂದ 2 ನೇ ಪ್ರತಿವಾದಿಯಾದ ಶಿವರಾಮಪ್ಪರವರು ದಾವಾ ಆಸ್ತಿಯನ್ನು ಖರೀದಿ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೇ ನಂ. 251 ಇರುವುದು. ಅದರ ವಿಸ್ತೀರ್ಣ 13 ಚೆಲ್ಲರೆ ಇರುವುದು. ದಾವಾ ಆಸ್ತಿಯ ಪಶ್ಚಿಮಕ್ಕೆ ಹರಿಹರ ರಸ್ತೆ, ಪೂರ್ವಕ್ಕೆ ಹರಪನಹಳ್ಳಿ ರಸ್ತೆ, ಉತ್ತರಕ್ಕೆ ಗಂಗಜ್ಜನ ಮನೆ, ದಕ್ಷಿಣಕ್ಕೆ ಮುದ್ದಿಯಪ್ಪನ ಮನೆ ಇರುವುದು. ದಾವಾ ಆಸ್ತಿಯಲ್ಲಿ ಪ್ರತಿವಾದಿಯರ ಮನೆ ಇರುವುದು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1975 ರಿಂದ ಪ್ರತಿವಾದಿಯರು ಮನೆಯನ್ನು ಕಟ್ಟಿಕೊಂಡು ಸ್ವಾಧೀನ ಅನುಭವದಲ್ಲಿರುವರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಜಾಗದ ವಿಚಾರವಾಗಿ ಸಲ್ಲಿಸಲಾಗಿದೆ. ಈ ದಾವೆಯನ್ನು ಹೊಳಿಯಪ್ಪ ಹಾಗೂ ಶಫಿಸಾಬ್ ಇವರು ಜಯಪ್ಪನ ವಿರುದ್ಧ ಹಾಕಿರುವರು.

ದಾವಾ ಆಸ್ತಿಯ ಸುತ್ತ ಮುತ್ತ ನನಗೆ ಸೇರಿದ ಯಾವುದೇ ಆಸ್ತಿ ಇರುವುದಿಲ್ಲ. ದಾವಾ ಆಸ್ತಿ 23 ಸೆಂಟ್ಸ್ ನಲ್ಲಿ ವಾದಿ ಹಾಗೂ ಪ್ರತಿವಾದಿಯರ ಮನೆಗಳಿವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಜಯಪ್ಪ ಹಾಗೂ ಹನುಮಂತಪ್ಪನ ಮನೆಗಳಿವೆ. ಸದರಿ ಮನೆಗಳ ಡೋರ್ ನಂಬರ್ ವಿಸ್ತೀರ್ಣ ನನಗೆ ಹೇಳಲಾಗುವುದಿಲ್ಲ. ನನಗೆ ದಾವಾ ಆಸ್ತಿಯ ಬಗ್ಗೆ ಏನೂ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ. 3 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿರುವರು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

29.08.2024

**ಸಿವಿಲ್ ನ್ಯಾಯಾಧೀಶರು ಮತ್ತು**

O.S. 208/2013
P.W.3

**ಜೆ.ಎಂ.ಎಫ್.ಸಿ. ಹರಪನಹಳ್ಳಿ**